14	ಕೋಲಾರ	0	0.00	0	0.00
15	ಮಂಡ್ಯ	0	0.00	4614	184.37
16	ಮೈಸೂರು	0	0.00	0	0.00
17	ಉತ್ತರ ಕನ್ನಡ	0	0.00	0	0.00
18	ರಾಯಚೂರು	0	0.00	1222	37.18
19	ಶಿವಮೊಗ್ಗ	0	0.00	252	21.04
20	ದಕ್ಷಿಣ ಕನ್ನಡ	0	0.00	0	0.00
21	ತುಮಕೂರು	0	0.00	8319	246.93
	ಒಟ್ಟು	**0**	**0.00**	**53080**	**1890.63**

ಹೆಚ್ಚಿನ ವಾಹನ ಸಂಚಾರ

936 (1492); ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಅಥಣಿ)

(ಅ) ಅಥಣಿ ಪಟ್ಟಣದ ವ್ಯಾಪ್ತಿಯಲ್ಲಿ ಬರುವ ಬಿಜಾಪುರ – ಸಂಕೇಶ್ವರ ರಾಷ್ಟ್ರೀಯ ಹೆದ್ದಾರಿ–12 ರಲ್ಲಿ ಹೆಚ್ಚಿನ ವಾಹನ ಸಂಚಾರ ಸಾಂದ್ರತೆ ಯಿಂದಾಗಿ ಅಪಘಾತಗಳು ಸಂಭವಿಸುತ್ತಿರುವ ಮಾಹಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಈ ಹೆಚ್ಚಿನ ವಾಹನ ಸಂಚಾರ ತಡೆಗಟ್ಟಲು ಪರ್ಯಾಯ ವಾಗಿ ಬೈಪಾಸ್ ರಸ್ತೆಯನ್ನು ನಿರ್ಮಿಸಲು ಸರ್ಕಾರದಿಂದ ಉದ್ದೇಶಿ ಸಲಾಗಿದೆಯೇ; ಇದಲ್ಲಿ, ಸರ್ಕಾರದಿಂದ ಕೈಗೊಂಡ ಕ್ರಮಗಳೇನು?

ಡಾ: ಹೆಚ್. ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

(ಅ) ಬಂದಿದೆ.

(ಆ) ಅಥಣಿ ಪಟ್ಟಣದಲ್ಲಿ ಹೆಚ್ಚಿನ ವಾಹನ ಸಂಚಾರ ತಡೆಗಟ್ಟಲು ಒಟ್ಟು ` 6000.00 ಲಕ್ಷಗಳಲ್ಲಿ 12.50 ಕಿ. ಮೀ. ಉದ್ದದ ಬೈಪಾಸ್ ರಸ್ತೆಯನ್ನು ಅಸೈಡ್ ಯೋಜನೆಯಡಿ ನಿರ್ಮಿಸಲು ಪರಿಶೀಲಿಸಲಾಗುತ್ತಿದೆ.

ಅನುದಾನ ಬಿಡುಗಡೆ

937 (885); ಶ್ರೀ ಮಕಬುಲ್ ಎಸ್. ಬಾಗವಾನ್ (ಬಿಜಾಪುರ ನಗರ)

(ಅ) ಜಿಲ್ಲಾ ಮತ್ತು ಇತರೆ ರಸ್ತೆಗಳ ಸುಧಾರಣೆ / ನವೀಕರಣಕ್ಕೆ ವಿಜಾಪೂರ ಜಿಲ್ಲೆಗೆ ಎಷ್ಟು ಅನುದಾನ ಮಂಜೂರಾಗಿದೆ.

(ಆ) ಬಿಡುಗಡೆ ಮಾಡಿರುವ ಅನುದಾನದಲ್ಲಿ ಯಾವ ಕಾಮಗಾರಿ ಕೈಗೊಳ್ಳಲಾಗಿದೆ;

(ಇ) ವಿಜಾಪೂರ (ನಗರ) ಮತಕ್ಷೇತ್ರದಲ್ಲಿ ಎಷ್ಟು ಕಾಮಗಾರಿಗಳು ಕೈಗೆತ್ತಿಕೊಳ್ಳಲಾಗಿದೆ ಅವುಗಳ ರೂಪುರೇಷೆಗಳೇನು?

ಡಾ: ಹೆಚ್. ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

(ಅ) ಜಿಲ್ಲಾ ಮತ್ತು ಇತರೆ ರಸ್ತೆಗಳ ಸುಧಾರಣೆ / ನವೀಕರಣಕ್ಕಾಗಿ ಬಿಜಾಪೂರ ಜಿಲ್ಲೆಗೆ ಮಂಜೂರಾದ ಅನುದಾನ ವಿವರಗಳು ಈ ಕೆಳಗಿನಂತಿವೆ:

ಲೆಕ್ಕ ಶೀರ್ಷಿಕೆ	2013–14ನೇ ಸಾಲಿನ ಹೊಸ ಕಾಮಗಾರಿಗಳು (ರೂ. ಲಕ್ಷಗಳಲ್ಲಿ)	2013–14ನೇ ಸಲಿನ ಮುಂದುವರೆದ ಕಾಮಗಾರಿಗಳು (ರೂ. ಲಕ್ಷಗಳಲ್ಲಿ)
1) 5054 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ	6705.00	537.00
2) 5054 ಜಿಲ್ಲಾ ಮುಖ್ಯ ರಸ್ತೆ ನವೀಕರಣ	935.00	395.00
ಒಟ್ಟು	**7640.00**	**932.00**